**ಓ.ಎಸ್. ನಂಃ 482/2017**

**ಡಿ.ಡಬ್ಲ್ಯೂಃ 1**

**ದಿನಾಂಕ 25.03.2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ವಾದಿಯ ಪರ ಃ ಶ್ರೀ ಜೆ.ಜಿ ವಕೀಲರಿಂದಃ</u>**

1. ವಾದಿಯು ನನಗೆ ಸಂಬಂದದಲ್ಲಿ ಚಿಕ್ಕಮ್ಮ ಆಗಬೇಕು. ನನ್ನ ತಂದೆಯಾದ ಪಾಂಡುರಂಗೇಗೌಡ ಹಾಗೂ ವಾದಿಯ ತಂದೆಯಾದ ಜಗದೀಶ ಇವರಿಬ್ಬರು ಖಾಸಾ ಅಣ್ಣ-ತಮ್ಮಂದಿರು ಹಾಗೂ ಅವರಿಬ್ಬರು ನಿಂಗೇಗೌಡರ ಮಕ್ಕಳು. ನನ್ನ ತಾತನಾದ ನಿಂಗೇಗೌಡರಿಗೆ ಒಟ್ಟು 4 ಜನ ಮಕ್ಕಳು. ನನ್ನ ತಾತನಾದ ನಿಂಗೇಗೌಡರಿಗೆ ಸೇರಿದ ಎಲ್ಲಾ ಆಸ್ತಿಗಳನ್ನು ಅವರ 4 ಜನ ಮಕ್ಕಳು ಸಹ ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಪಾಲು ವಿಭಾಜನೆಯು ಮೌಖಿಕವಾಗಿ ನಡೆದಿತ್ತು ಎಂದರೆ ಸರಿ. ನಿಂಗೇಗೌಡರ ಮಕ್ಕಳ ಮಧ್ಯೆ ನಡೆದ ಸದರಿ ಮೌಖಿಕ ಪಾಲು ವಿಭಜನೆಯಲ್ಲಿ ವಾದಿಯ ಗಂಡನ ಹಿಸ್ಸೆಗೆ ಹೋಗಿದ್ದ ಆಸ್ತಿಗಳ ಸ್ವಾಧೀನದಲ್ಲಿ ವಾದಿ ಇರುತ್ತಾರೆ ಹಾಗೂ ನನ್ನ ತಂದೆಯ ಹಿಸ್ಸೆಗೆ ಬಂದ ಆಸ್ತಿಗಳ ಸ್ವಾಧೀನದಲ್ಲಿ ನಾವೇ ಇದ್ದೇವೆ ಎಂದರೆ ಸರಿ.

2. ಸದರಿ ಮೌಖಿಕ ಪಾಲು ವಿಭಜನೆಯಲ್ಲಿ ವಾದಿಯ ಗಂಡನ ಹಿಸ್ಸೆಗೆ ಹೋಗಿದ್ದ ಆಸ್ತಿಗಳನ್ನು ವಾದಿಯ ಗಂಡನಾದ ಜಗದೀಶ ರವರೇ ಸ್ವತಃ ವಾದಿಯ ಹೆಸರಿಗೆ ವರ್ಗಾವಣೆ ಮಾಡಿಸಿರುತ್ತಾರೆ ಎಂದರೆ ಸರಿ. ನಮ್ಮ ಹಿಸ್ಸೆಗೆ ಬಂದ ಆಸ್ತಿಗಳ ಕಂದಾಯ ದಾಖಲೆಗಳನ್ನು ಹಾಗೂ ವಾದಿಯ ಗಂಡನ ಹಿಸ್ಸೆಗೆ ಹೋಗಿದ್ದ ಆಸ್ತಿಗಳ ಕಂದಾಯ ದಾಖಲೆಗಳನ್ನು ನಾನು ನೋಡಿರುತ್ತೇನೆ ಎಂದರೆ ಸರಿ.

3. ದಾವಾ ಆಸ್ತಿ ಸರ್ವೇ ನಂಬರ್ 57/3 ಅಂತ ಇರುತ್ತದೆ. ಸರ್ವೇ ನಂಬರ್ 57/1 ಹಾಗೂ ಸರ್ವೇ ನಂಬರ್ 57/3 ರಲ್ಲಿ ಒಟ್ಟು 1 ಎಕರೆ ಜಮೀನನ್ನು ವಾದಿಯ ಗಂಡನಾದ ಜಗದೀಶ ರವರು ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ. ನಿಪಿ.9 ರ ಪ್ರಕಾರ ಸರ್ವೇ ನಂಬರ್ 57 ರಲ್ಲಿ ಪ್ರತಿವಾದಿಯ ಹೆಸರಿಗೆ 15 ಗುಂಟೆ ಜಮೀನು ಖಾತೆ ವರ್ಗಾವಣೆ ಆಗಿರುತ್ತದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಸರ್ವೇ ನಂಬರ್ 57/1 ಹಾಗೂ ಸರ್ವೇ ನಂಬರ್ 57/3 ರಲ್ಲಿ ಒಟ್ಟು 1 ಎಕರೆ ಜಮೀನನ್ನು

ವಾದಿಯ ಗಂಡನಾದ ಜಗದೀಶ ರವರು ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ.

4. ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ. ಸಾಕ್ಷಿಗೆ ಈಗ ನಿಪಿ.9 ರ ದಾಖಲೆಯನ್ನು ತೋರಿಸಿ ಸದರಿ ದಾಖಲೆಯಲ್ಲಿ ವಾದಿಯ ಹೆಸರಿಗೆ 8 ಗುಂಟೆ ಜಮೀನು ಇರುವುದಾಗಿ ನಮೂದಾಗಿದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಿಪಿ.9 ರ ದಾಖಲೆಯಲ್ಲಿ ವಾದಿಯ ಹೆಸರಿಗೆ 8 ಗುಂಟೆ ಜಮೀನು ನಮೂದಾಗಿರುವುದು ಹೌದು ಎಂದು ನುಡಿದಿರುತ್ತಾರೆ. ಎಮ್.ಆರ್ 2/2006-07 ರ ಪ್ರಕಾರ ಸದರಿ 8 ಗುಂಟೆ ಜಮೀನು ವಾದಿಯ ಹೆಸರಿಗೆ ವರ್ಗಾವಣೆ ಆಗಿರುತ್ತದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ವಾದಿಯು ತಮ್ಮ ಹೆಸರಿಗೆ ಆ ರೀತಿ ಜಮೀನು ವರ್ಗಾವಣೆ ಮಾಡಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ.

5. ಮೊದಲು ವಾದಿಯ ಗಂಡನಾದ ಜಗದೀಶ ರವರು ದಾವಾ ಆಸ್ತಿಯ ಸ್ವಾಧಿನದಲ್ಲಿದ್ದು, ನಂತರದಲ್ಲಿ ವಾದಿಯೇ ದಾವಾ ಆಸ್ತಿಯ ಸ್ವಾಧೀನದಲ್ಲಿ ಇರುತ್ತಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ವಾದಿಯು ಅಕ್ರಮವಾಗಿ ದಾವಾ ಆಸ್ತಿಯ ಖಾತೆಯನ್ನು ತಮ್ಮ ಹೆಸರಿಗೆ ವರ್ಗಾವಣೆ ಮಾಡಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ವಾದಿಯ ಹೆಸರಿಗೆ ದಾವಾ ಆಸ್ತಿಯನ್ನು ವರ್ಗಾವಣೆ ಮಾಡುವಂತೆ ಆದ ಎಮ್.ಆರ್ 2/2006-07 ಆದೇಶವನ್ನು ನಾನು ಎಲ್ಲಿಯೂ ಸಹ ಪ್ರಶ್ನೀಸಿರುವುದಿಲ್ಲ.

**ಈ ಹಂತದಲ್ಲಿ ವಾದಿ ಮತ್ತು ಪ್ರತಿವಾದಿ ಪರ ವಕೀಲರ ಮಧ್ಯೆ ಮಾತಿನ ಚಕಾಮಕಿ ಆದ ಕಾರಣ ಮುಂದುವರೆದ ಪಾಟೀ ಸವಾಲು ತೆಗೆದುಕೊಳ್ಳಲು ನ್ಯಾಯಾಲಯಕ್ಕೆ ಅನಾನೂಕೂಲವಾದ ಕಾರಣ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು, ಕೆ.ಆರ್.ನಗರ.**